# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮಂ.ವಿ./ಪ.ವಿ./2020-21/ಇ.16

ಕುಲಸಚಿವ (ಪರೀಕ್ಷಾಂಗ)ರ ಕಛೇರಿ,
ಮಂಗಳಗಂಗೋತ್ರಿ - 574 199.
ದಿನಾಂಕ: 06.02.2023

**ಪ್ರಕಟಣೆ**

ವಿಷಯ: ಮಾರ್ಚ್/ಎಪ್ರಿಲ್ 2023ರಲ್ಲಿ ನಡೆಯಲಿರುವ ವಿವಿಧ ಸ್ನಾತಕೋತ್ತರ ಕಾರ್ಯಕ್ರಮಗಳ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಪರೀಕ್ಷೆಗಳ ಬಗ್ಗೆ.

--------

ಮಂಗಳೂರು ವಿಶ್ವವಿದ್ಯಾನಿಲಯದ 2022-23ನೇ ಶೈಕ್ಷಣಿಕ ವರ್ಷದ ಎಂ.ಎ. ಇಂಗ್ಲೀಷ್, ಕನ್ನಡ, ಸಂಸ್ಕೃತ, ಹಿಂದಿ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ, ಇತಿಹಾಸ ಮತ್ತು ಪುರಾತತ್ವಶಾಸ್ತ್ರ, ಕೊಂಕಣಿ ಹಾಗೂ ಎಂ.ಎಸ್.ಡಬ್ಲ್ಯು. ಎಂ.ಸಿ.ಜೆ. ಸ್ನಾತಕೋತ್ತರ ಕಾರ್ಯಕ್ರಮಗಳ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಪರೀಕ್ಷೆಗಳು **ದಿನಾಂಕ 20.03.2023 ರಿಂದ** ಪ್ರಾರಂಭವಾಗಲಿರುವುದು ಎಂಬುದನ್ನು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ಕಾಲೇಜು ಪ್ರಾಂಶುಪಾಲರುಗಳು ಹಾಗೂ ಸದರಿ ಪರೀಕ್ಷೆಗಳಿಗೆ ಹಾಜರಾಗಲಿರುವ ಎಲ್ಲಾ ಅಭ್ಯರ್ಥಿಗಳ ಗಮನಕ್ಕೆ ಈ ಮೂಲಕ ತರಲಾಗಿದೆ.

**ಸೂಚನೆಗಳು:**

1. ಮೇಲಿನ ಸೆಮಿಸ್ಟರ್ ನಿಯಮಿತ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಿಗೆ/ಪತ್ರಿಕೆಗಳಿಗೆ ಕಡ್ಡಾಯವಾಗಿ **UUCMS Portal** ನಲ್ಲಿ ನೋಂದಣಿ ಮಾಡತಕ್ಕದ್ದು. ಹಾಗೂ ಸಂಬಂಧಿಸಿದ ಪರೀಕ್ಷಾ ಶುಲ್ಕವನ್ನು Online ನಲ್ಲಿಯೇ **UUCMS Portal** ನ ಮುಖಾಂತರ ಪಾವತಿಸತಕ್ಕದ್ದು. ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಿಗೆ/ಪತ್ರಿಕೆಗಳಿಗೆ ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು.

2. ಪ್ರಥಮ ಮತ್ತು ತೃತೀಯ ಸೆಮಿಸ್ಟರ್ **ಪುನರಾವರ್ತಿತ** ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಈ ಕೆಳಗಿನಂತೆ ನೋಂದಾಯಿಸತಕ್ಕದ್ದು.
   - 2021-222ನೇ ಸಾಲಿಗಿಂತ ಮೊದಲು ಪ್ರವೇಶಾತಿ ಪಡೆದ (MuLinx ಬ್ಯಾಚ್‌ನ) ವಿದ್ಯಾರ್ಥಿಗಳ ಅರ್ಜಿಯನ್ನು MuLinx Portalನಲ್ಲಿ ನೋಂದಾಯಿಸಿ, ಪರೀಕ್ಷಾ ಶುಲ್ಕವನ್ನು ಬ್ಯಾಂಕ್ ಚಲನ್ ಮೂಲಕ ಪಾವತಿಸತಕ್ಕದ್ದು.
   - 2021-22 ಹಾಗೂ ನಂತರ ಪ್ರವೇಶಾತಿ ಪಡೆದ **(UUCMS** ಬ್ಯಾಚ್‌ನ) ವಿದ್ಯಾರ್ಥಿಗಳ ಅರ್ಜಿಯನ್ನು **UUCMS Portal** ನಲ್ಲಿ ನೋಂದಾಯಿಸಿ, ಶುಲ್ಕವನ್ನು ಆನ್-ಲೈನ್‌ನಲ್ಲಿಯೇ **UUCMS Portal** ಮೂಲಕ ಪಾವತಿಸತಕ್ಕದ್ದು.

3. ಸವಿವರವಾದ ವೇಳಾಪಟ್ಟಿಯನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು.

4. ***ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಸದ್ರಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಶುಲ್ಕ ಪಾವತಿಸಿದ ರಶೀದಿ/ಚಲನ್‌ನನ್ನು ಪ್ರತ್ಯೇಕವಾಗಿ ಎಲ್ಲಾ ವಿವರಗಳನ್ನೊಳಗೊಂಡ ಮಾಹಿತಿಯೊಂದಿಗೆ ಸಲ್ಲಿಸತಕ್ಕದ್ದು.***

5. *ಕುಲಸಚಿವರಿಂದ ಪ್ರವೇಶಾತಿ ಅನುಮೋದನೆಯಾಗದ / ಕಡಿಮೆ ಹಾಜರಾತಿ ಇರುವ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ.* **ಪ್ರವೇಶಾವಕಾಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾನಿಲಯದಿಂದ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟ ಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ವಿಭಾಗ / ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯೂ, ವಿಭಾಗ / ಕಾಲೇಜು ಅಥವಾ ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಅಲ್ಲದೆ ಆಯಾ ಕೋರ್ಸಿನ ನಿಯಮದ ಪ್ರಕಾರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸುವಂತಿಲ್ಲ.**

6. ಇನ್ನಿತರ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿರುವುದರಿಂದ (ವಿಭಾಗ / ಕಾಲೇಜು ಮತ್ತು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ) ವಿಭಾಗ / ಕಾಲೇಜುಗಳಲ್ಲಿ ಹಾಜರಿಲ್ಲದ ವಿದ್ಯಾರ್ಥಿಗಳು ಕೂಡಾ ನಿಗದಿತ ಶುಲ್ಕದೊಂದಿಗೆ ಆನ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿಯನ್ನು (ಇತರ ವಿದ್ಯಾರ್ಥಿಗಳೊಂದಿಗೆ) ಸಲ್ಲಿಸುವಂತೆ ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು/ಕಾಲೇಜುಗಳ ಪ್ರಾಂಶುಪಾಲರುಗಳು ನಿಗಾವಹಿಸತಕ್ಕದ್ದು.

7. ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳ ಪರೀಕ್ಷಾ ಹಣಕಾಸು ತಖ್ತೆ ಹಾಗೂ ಪರೀಕ್ಷಾರ್ಥಿಗಳ ಪಟ್ಟಿಯನು ಅನುಮೋದಿಸಲ್ಪಟ್ಟ ಪ್ರವೇಶಾನುಮೋದನೆ ಪಟ್ಟಿಯಲ್ಲಿ ಸೂಚಿಸಿರುವ ಮಾದರಿಯಲ್ಲಿ ಯಾವುದೇ ಕಾಗುಣ ವ್ಯತ್ಯಾಸವಿಲ್ಲದಂತೆ ದಾಖಲಿಸಬೇಕು.

8. ವಿಶ್ವವಿದ್ಯಾನಿಲಯದ ವಿನಿಯಮಾವಳಿ (ರೆಗ್ಯುಲೇಶನ್) ಪ್ರಕಾರ ಪರೀಕ್ಷೆಗೆ ಹಾಜರಾಗಲು ಅರ್ಹತೆಯನ್ನು ಹೊಂದಿದ ವಿದ್ಯಾರ್ಥಿಗಳಿಗೆ ಮಾತ್ರ ಆನ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿಯನ್ನು ಸಲ್ಲಿಸಲು ಅನುಮತಿಯನ್ನು ನೀಡಲಾಗಿದೆ. ವಿಶ್ವವಿದ್ಯಾನಿಲಯದ ತಿದ್ದುಪಡಿ ವಿನಿಯಮದ ಪ್ರಕಾರ 2013 ಹಾಗೂ ಅದರ ಹಿಂದಿನ ಸಾಲಿನ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ವಿಶೇಷ ಪರೀಕ್ಷಾ ಶುಲ್ಕವನ್ನು ಪಾವತಿಸಿ, ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾಗಿರುತ್ತಾರೆ. ಸದ್ರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು. ಇಲ್ಲವಾದಲ್ಲಿ ವಿಭಾಗ / ಕಾಲೇಜಿನ ಮುಖ್ಯಸ್ಥರೇ ಜವಾಬ್ದಾರರಾಗುವರು.

9. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು (ದಂಡಶುಲ್ಕ ರಹಿತ ಮತ್ತು ದಂಡಶುಲ್ಕ ಸಹಿತ) ವಿಭಾಗ / ಕಾಲೇಜಿನ ಮುಖ್ಯಸ್ಥರಲ್ಲಿ ಪಾವತಿ ಮಾಡಲು ಈ ಕೆಳಕಂಡ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

**ಪರೀಕ್ಷಾ ಶುಲ್ಕವನ್ನು ಕಟ್ಟಲು ನಿಗದಿಪಡಿಸಲಾದ ಅಂತಿಮ ದಿನಾಂಕ:**

**ದಂಡ ಶುಲ್ಕ ರಹಿತ:**

ಪ್ರಥಮ/ತೃತೀಯ ಸೆಮಿಸ್ಟರ್ (ನಿಯಮಿತ ಹಾಗೂ ಪುನರಾವರ್ತಿತ) } 07.02.2023 ರಿಂದ 16.02.2023 ರವರೆಗೆ

**ದಂಡ ಶುಲ್ಕದೊಂದಿಗೆ**

(ದಿನವೊಂದಕ್ಕೆ ರೂ. 280/-ರಂತೆ):

ಪ್ರಥಮ/ತೃತೀಯ ಸೆಮಿಸ್ಟರ್ (ನಿಯಮಿತ ಹಾಗೂ ಪುನರಾವರ್ತಿತ) } 17.02.2023 ರಿಂದ 20.02.2023 ರವರೆಗೆ

10. ಒಮ್ಮೆ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗಳಿಗೆ ಸರಿದೂಗಿಸಿಕೊಳ್ಳಲಾಗುವುದಿಲ್ಲ.

11. ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ದರಗಳು :

| ಕ್ರಮ ಸಂಖ್ಯೆ | ಕೋರ್ಸ್ | ಶುಲ್ಕ | |
|---|---|---|---|
| | | ಪ್ರತಿಯೊಂದು ಸೆಮಿಸ್ಟರ್/ ಪೂರ್ಣ ಪರೀಕ್ಷೆಗೆ | ವಿಷಯವೊಂದಕ್ಕೆ |
| 1. | ಎಂ.ಎ. ಕನ್ನಡ, ಸಂಸ್ಕೃತ, ಇಂಗ್ಲೀಷ್, ಹಿಂದಿ, ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಹಾಗೂ ಕೊಂಕಣಿ. | ರೂ. 1,070.00 | ರೂ. 500.00 |
| 2. | ಎಂ.ಎ. ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ, ಹಾಗೂ ಎಂ.ಎಸ್.ಡಬ್ಲ್ಯು. | ರೂ. 1,630.00 | ರೂ. 500.00 |
| **ಮೇಲೆ ನಿಗದಿಪಡಿಸಿದ ಪರೀಕ್ಷಾ ಶುಲ್ಕದ ಜೊತೆಗೆ ಪ್ರತೀ ಪರೀಕ್ಷೆಗೆ ರೂ.230.00 ಅಂಕಪಟ್ಟಿ ಶುಲ್ಕ ಮತ್ತು ರೂ. 120.00 ಆನ್‌ಲೈನ್ ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕಗಳನ್ನು ಪಾವತಿಸತಕ್ಕದ್ದು.** | | | |

* ವಿದ್ಯಾರ್ಥಿಗಳು ಪರೀಕ್ಷೆಯ ಯಾವುದಾದರೂ ಭಾಗ/ಭಾಗಗಳಿಗೆ ಪಾವತಿಸಲಿರುವ ಒಟ್ಟು ಪರೀಕ್ಷಾ ಶುಲ್ಕವು ನಿಗದಿತ ಪೂರ್ಣ ಪರೀಕ್ಷಾ ಶುಲ್ಕವನ್ನು ಮೀರಬಾರದು.

12. ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಕರ್ನಾಟಕ ರಾಜ್ಯದ ಅಭ್ಯರ್ಥಿಗಳು ಮಾತ್ರ ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯಲು ಅರ್ಹರಾಗಿರುತ್ತಾರೆ. ಸದ್ರಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಕಾಲೇಜು ಮುಖ್ಯಸ್ಥರು ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಣೆ ಪಡೆದು ಹಿಂದಿನ ವರ್ಷಗಳ ಶುಲ್ಕ ಬಾಕಿಯಿದ್ದಲ್ಲಿ ಅದನ್ನು ವಿಶ್ವವಿದ್ಯಾನಿಲಯ ನಿಧಿಗೆ ಜಮೆ ಮಾಡುವಂತೆ ತಿಳಿಸಲಾಗಿದೆ.

ಆ) ಪ್ರ. ವರ್ಗ-1 (ಆದಾಯ ಮಿತಿ ರೂ.2,50,000.00 ಮೀರದ) ಹಾಗೂ ಇತರೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ರೂ. 1,00,000.00ಕ್ಕಿಂತ ಕಡಿಮೆ ಇರುವ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಸುವುದು. ತದನಂತರ ಕಾಲೇಜು ಪ್ರಾಂಶುಪಾಲರ ಮೂಲಕ ಸಂಬಂಧಪಟ್ಟ ಇಲಾಖೆಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿ, ಬ್ಯಾಂಕ್ ಖಾತೆಗೆ ಜಮೆ ಮಾಡುವ ಬಗ್ಗೆ ಕ್ಲೇಮು ಸಲ್ಲಿಸುವುದು.

ಇ) ಪುನರಾವರ್ತಿತ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿ ಪಡೆಯಲು ಅರ್ಹರಾಗಿರುವುದಿಲ್ಲ. ಆದರೆ ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳೂ ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳು ರೂ. 230.00 ಅಂಕಪಟ್ಟಿ ಶುಲ್ಕ ಮತ್ತು

ರೂ. 120.00 ಆನ್‌ಲೈನ್ ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕವನ್ನು ಪಾವತಿಸತಕ್ಕದ್ದು.

ಈ) ವಿದೇಶಿ ಅಭ್ಯರ್ಥಿಗಳು ನಿಗದಿಪಡಿಸಿದ ಎಲ್ಲಾ ಶುಲ್ಕದ ಮೂರು ಪಟ್ಟು ಶುಲ್ಕವನ್ನು ಪಾವತಿಸತಕ್ಕದ್ದು.

13. ಪುನರಾವರ್ತಿತ ವಿದ್ಯಾರ್ಥಿಗಳಿಂದ ಪಡೆದ ಶುಲ್ಕವನ್ನು ಈ ಕೆಳಗಿನ ಕೋಡ್ ಸಂಖ್ಯೆಗಳಲ್ಲಿ ಬ್ಯಾಂಕ್ ಚಲನ್ ಮುಖಾಂತರ ಮಂಗಳೂರು ವಿಶ್ವವಿದ್ಯಾನಿಲಯ ನಿಧಿಗೆ ಪಾವತಿಸತಕ್ಕದ್ದು.

ಅ) ಅರ್ಜಿ ಶುಲ್ಕ ... 008/14

ಆ) ಪರೀಕ್ಷಾ ಶುಲ್ಕ ... 008/23

ಇ) ಅಂಕಪಟ್ಟಿ ಶುಲ್ಕ ... 008/24

**14. ಕೆಳಗೆ ನಮೂದಿಸಿರುವ ತಖ್ತೆಗಳನ್ನು ಮತ್ತು ದಾಖಲೆ ಪತ್ರಗಳನ್ನು ಈ ಕಛೇರಿಗೆ ದಿನಾಂಕ: *23.02.2023ರ* ಒಳಗಾಗಿ ತಪ್ಪದೇ ಕಳುಹಿಸಿಕೊಡುವುದು.**

ಅ) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿ - ದ್ವಿಪ್ರತಿಗಳಲ್ಲಿ.

ಆ) ಪುನರಾವರ್ತಿತ ವಿದ್ಯಾರ್ಥಿಗಳ (MU Linx) ಕ್ರೋಢೀಕೃತ ಪರೀಕ್ಷಾ ಶುಲ್ಕವನ್ನು ಪಾವತಿಸಿದ ಚಲನ್ ಅಥವಾ ಡಿ.ಡಿ.

ಇ) ಹಣಕಾಸು ತ:ಖ್ತೆ - ಆನ್‌ಲೈನ್ ಪ್ರಿಂಟ್

ಈ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ನೀಡಲಾದ ಶುಲ್ಕ ವಿನಾಯಿತಿ ತ:ಖ್ತೆ. ಅಂತಹ ಯಾವುದೇ ಬೇಡಿಕೆಗಳು ಇಲ್ಲದಿದ್ದಲ್ಲಿ ಶೂನ್ಯ ವರದಿಯನ್ನು ತಪ್ಪದೆ ಕಳುಹಿಸಿಕೊಡಬೇಕು.

**15. ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಿ, ಅಂತಿಮ ಆನ್‌ಲೈನ್ ಪ್ರಿಂಟಿಂಗ್ ಪ್ರತಿಗಳನ್ನು (ದ್ವಿಪ್ರತಿಗಳಲ್ಲಿ) ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ 8 ದಿನಗಳ ಮುಂಚಿತವಾಗಿ ಈ ಕಛೇರಿಗೆ ತಪ್ಪದೆ ಸಲ್ಲಿಸಲು ತಿಳಿಸಲಾಗಿದೆ.**

**16. ಪ್ರಶ್ನೆಪತ್ರಿಕೆ ಬೇಡಿಕೆ ಪಟ್ಟಿಯನ್ನು ನೀಡುವ ಹೊಸ ವಿಧಾನವನ್ನು ಶೀಘ್ರವಾಗಿ ತಿಳಿಸಲಾಗುವುದು.**

07/02/2023

**ಕುಲಸಚಿವರು (ಪರೀಕ್ಷಾಂಗ)**

**ಗೆ:** ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ಕೋರ್ಸನ್ನು ಹೊಂದಿರುವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ, ಸೂಚನಾಫಲಕದಲ್ಲಿ ಪ್ರಕಟಿಸುವಂತೆ ತಿಳಿಸಲಾಗಿದೆ.

**ಪ್ರತಿ:**

1. ಡೀನ್‌ರವರು, ಕಲೆ, ವಾಣಿಜ್ಯ, ವಿಜ್ಞಾನ ಮತ್ತು ಶಿಕ್ಷಣ ನಿಕಾಯ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
2. ಕುಲಸಚಿವರು (ಮೌಲ್ಯಮಾಪನ) ಬೆಂಗಳೂರು / ಕರ್ನಾಟಕ / ಮೈಸೂರು / ಗುಲ್ಬರ್ಗಾ / ಕುವೆಂಪು ವಿಶ್ವವಿದ್ಯಾನಿಲಯ.
3. ಕುಲಸಚಿವರು/ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
4. ಕುಲಪತಿಯವರ ಆಪ್ತ ಕಾರ್ಯದರ್ಶಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
5. ವಿಶೇಷಾಧಿಕಾರಿ (ಪರೀಕ್ಷಾಂಗ) 1 ಮತ್ತು 2, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
6. ಎಲ್ಲಾ ಅಧೀಕ್ಷಕರು/ಸಹಾಯಕ ಕುಲಸಚಿವರು, ಪರೀಕ್ಷಾಂಗ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
7. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ವಿಶ್ವವಿದ್ಯಾನಿಲಯ, ಕಾಲೇಜು ಆವರಣ, ಮಂಗಳೂರು
8. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಜಿಲ್ಲಾಧಿಕಾರಿ ಆಫೀಸಿನ ಬಳಿ, ಮಂಗಳೂರು.
9. ಆಪ್ತ ಸಹಾಯಕರು, ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
10. ಇ.9/ಇ.11 ವಿಷಯ ನಿರ್ವಾಹಕರು/ಕಂಪ್ಯೂಟರ್ ವಿಭಾಗಕ್ಕೆ ಮಾಹಿತಿಗಾಗಿ.